# ನಾಲು ಎತ್ತು ಕುದುರೆಯಾಯಿತು

ನಶಿಸುತ್ತಿರುವ ದೇಸಿ ಕಸುಬುಗಳಲ್ಲಿ ನಾಲು (ಲಾಳ)ಕಟ್ಟುವುದೂ ಒಂದು. ಬೇಸಾಯದ ಜೀವಾಳವಾಗಿರುವ ಎತ್ತುಗಳನ್ನು ಮನೆ ಮಕ್ಕಳಂತೆ ಸಾಕುವ ರೈತರು ಅವುಗಳ ಆರೈಕೆಯ ಮುತುವರ್ಜಿವಹಿಸುತ್ತಾರೆ. ಉತ್ತುವ–ಬಿತ್ತುವ, ಗಾಡಿ ಎಳೆದು ದುಡಿಯುವ ಎತ್ತುಗಳ ಕೊಳಗಗಳಿಗೆ (ಗೊರಸು) ಕಬ್ಬಿಣದ ಲಾಳಗಳನ್ನು ಕಟ್ಟಿಸಿ ಅವುಗಳನ್ನು ಮೊಳೆ, ಮುಳ್ಳು–ಕಲ್ಲುಗಳಿಂದ ರಕ್ಷಿಸುವ ಜೊತೆ ಟಾರು ರಸ್ತೆಯಲ್ಲಿ ಕಾಲು ಜಾರದಂತೆ ಬಿಗಿಹಿಡಿಯುತ್ತವೆ.

ಎತ್ತುಗಳ ಒರಟಾದ ಕೊಳಗ (ಗೊರಸು)ಗಳನ್ನು ತಿದ್ದಿ ತೀಡಿ ಲಾಳಗಳನ್ನು ಜೋಡಿಸಿ ಮೊಳೆ ಹೊಡೆಯುತ್ತಾರೆ. ಇದಕ್ಕೆ ಸಾಕಷ್ಟು ಅನುಭವ ಮತ್ತು ತಾಳ್ಮೆಬೇಕು. ಎಚ್ಚರ ತಪ್ಪಿದರೆ ಎತ್ತುಗಳಿಗೆ ಗಾಯವಾಗುವ ಸಂಭವ ಹೆಚ್ಚು. ಒಂದು ಬಾರಿ ಲಾಳ ಕಟ್ಟಿಸಿದ ನಂತರ ಎತ್ತುಗಳ ಕೆಲಸದ ಪ್ರಮಾಣ ಮತ್ತು ಅವುಗಳು ವಾಸಿಸುತ್ತಿರುವ ಮಣ್ಣಿನ ರೀತಿಯ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಮತ್ತೆ ಲಾಳ ಕಟ್ಟಿಸಬೇಕಾಗುತ್ತದೆ. ಇತ್ತೀಚಿಗೆ ಎತ್ತುಗಳ ಸಂಖ್ಯೆ ಕಡಿಮೆಯಾಗಿದ್ದು ತಲೆತಲಾಂತರದಿಂದ ನಾಲು ಕಟ್ಟುತ್ತಿರುವವರು ತಮ್ಮ ಬದುಕು ಕಟ್ಟಿಕೊಳ್ಳಲು ಕಷ್ಟಪಡುತ್ತಿದ್ದಾರೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ





# ‘ಜರಾಸಂಧ’ ಕಾಡು ಬಾದಾಮಿ

ಕಾಡು ಬಾದಾಮಿ ಮರಗಳು ದಪ್ಪನಾದ ಕಾಂಡ ಮತ್ತು ಅಗಲವಾದ ಎಲೆಗಳನ್ನು ಹೊಂದಿರುತ್ತವೆ. ಇವುಗಳನ್ನು ಅರಣ್ಯ ಇಲಾಖೆ ನೆರವಿನಿಂದ ಹಲವು ರಸ್ತೆ ಬದಿಗಳಲ್ಲಿ ನೆಡಲಾಗಿದೆ. ಇವು ಬಿಡುವ ಹಣ್ಣುಗಳು ಬಾವಲಿಗಳಿಗೆ ಅತಿಪ್ರಿಯ. ದಾವಣಗೆರೆಯಲ್ಲೊಂದು ಮರವನ್ನು ಯಾರೋ ಜರಾಸಂಧನ ದೇಹದಂತೆ ಸೀಳಿದ್ದಾರೆ. ತನ್ನ ಕಾಂಡದ ಮಧ್ಯಭಾಗ ಸಂಪೂರ್ಣ ನಶಿಸಿದ್ದರೂ ಬದುಕುವ ಛಲಬಿಡದೆ ಚಿಗುರಿ, ಬೆಳೆದು ನಿಂತಿದೆ. ಬದುಕುವ ತ್ರಾಣವನ್ನು ಒಗ್ಗೂಡಿಸಿದೆ. ಕಷ್ಟಗಳನ್ನು ಎದುರಿಸಿ ಬದುಕುವ ಚೇತನದ ಪಾಠವನ್ನು ಕಲಿಸುವಂತಿದೆ.

—ಎಸ್. ಶಿಶುಪಾಲ, ದಾವಣಗೆರೆ

# ಭವನಕ್ಕೆ ಚಾಮರ ಮರ

ಮೈಸೂರಿನ ಹೆಗ್ಗಳಿಕೆ ಎಂದೇ ಹೇಳಲಾಗುವ ಮೈಸೂರು ವಿಶ್ವ ವಿದ್ಯಾಲಯದ ಕಾರ್ಯಸೌಧ ಕ್ರಾಫರ್ಡ್ ಭವನವನ್ನು ನೋಡದೇ ಇರೋರೇ ಇಲ್ಲ ಅನ್ನಬಹುದು. ಎಂದು ಆದರೆ ಈ ಭವ್ಯ ಕಟ್ಟಡದ ಮುಂಭಾಗದಲ್ಲಿ ಅತ್ಯಂತ ಎತ್ತರಕ್ಕೆ ಕ್ರಿಸ್ಮಸ್ ಮರ ಬೆಳೆದಿರುವ ದೃಶ್ಯ ವೈಭವ ಸಾಕಷ್ಟು ಮಂದಿಯ ಗಮನಕ್ಕೆ ಬಂದಿರಲಾರದು. ಹಾಗೇ ಸುಮ್ಮನೆ ಗಮನಿಸಿ ನೋಡಿದಾಗ ಈ ಭವ್ಯ ಕಟ್ಟಡಕ್ಕೆ ತಲೆ ಬಾಗಿ ಚಾಮರ ಬೀಸುತ್ತಾ ಇದೆಯೇನೋ ಅನಿಸುತ್ತದೆ. ಇದೇ ರೀತಿ ಸಾಕಷ್ಟು ಎತ್ತರಕ್ಕೆ ಬೆಳೆದ ಮರವನ್ನು ಮೈಸೂರು ಟೌನ್ ಹಾಲ್ (ಶ್ರೀ ರಂಗಾಚಾರ್ಲು ಮೆಮೋರಿಯಲ್ ಹಾಲ್)ನ ಮುಂದೆಯೂ ಕಾಣಬಹುದು.

—ಆರ್. ವೀರೇಶ್ ಕುಮಾರ್, ಬೆಂಗಳೂರು

